# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **: 404 (332)** |
| **ಸದಸ್ಯರ ಹೆಸರು** | **: ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **: 10.12.2025** |
| **ಉತ್ತರಿಸುವ ಸಚಿವರು** | **: ಮಾನ್ಯ ಕಂದಾಯ ಸಚಿವರು** |

<table>
<tr><th>ಕ್ರ.ಸಂ.,</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಅತಿವೃಷ್ಟಿ ಹಾಗೂ ಭೀಮಾ ನದಿಯ ಪ್ರವಾಹದಿಂದ ತೊಗರಿ. ಭತ್ತ, ಹೆಸರು, ಸಜ್ಜೆ, ಸೂರ್ಯಕಾಂತಿ, ಮೆಕ್ಕೆಜೋಳ, ಕಬ್ಬು ಹಾಗೂ ತೋಟಗಾರಿಕೆ ಬೆಳೆಗಳು ಸೇರಿದಂತೆ ಎಷ್ಟು ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ:</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅತೀವೃಷ್ಟಿ ಹಾಗೂ ಭೀಮಾ ನದಿಯ ಪ್ರವಾಹದಿಂದ ತೊಗರಿ, ಭತ್ತ, ಹೆಸರು, ಸಜ್ಜೆ, ಸೂರ್ಯಕಾಂತಿ, ಮೆಕ್ಕೆಜೋಳ, ಕಬ್ಬು ಹಾಗೂ ತೋಟಗಾರಿಕೆ ಬೆಳೆಗಳು ಸೇರಿದಂತೆ ಆಗಿರುವ ಬೆಳೆಹಾನಿ ವಿವರಗಳು ಕೆಳಕಂಡಂತಿವೆ.
<table>
<tr><th>ಕ್ರ. ಸಂ.,</th><th>ಜಿಲ್ಲೆ</th><th>ಹಾನಿಯಾಗಿರುವ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ</th></tr>
<tr><td>1</td><td>ಕಲಬುರಗಿ</td><td>3,24,205.00</td></tr>
<tr><td>2</td><td>ಯಾದಗಿರಿ</td><td>1,12,336.36</td></tr>
</table></td></tr>
<tr><td>ಆ</td><td>ಬೆಳೆ ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ಬೆಳೆ ಪರಿಹಾರ ನೀಡಲಾಗಿದೆಯೇ: ನೀಡಿದ್ದಲ್ಲಿ ಎಷ್ಟು ಪರಿಹಾರ ನೀಡಲಾಗಿದೆ: (ವಿವರ ನೀಡುವುದು):</td><td>ಬೆಳೆ ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ನೀಡಿರುವ ಪರಿಹಾರದ ವಿವರಗಳು ಕೆಳಕಂಡಂತಿವೆ.<br>**(ರೂ. ಕೋಟಿಗಳಲ್ಲಿ)**
<table>
<tr><th>ಜಿಲ್ಲೆ</th><th>SDRF / NDRF ಮಾರ್ಗಸೂಯಂತೆ ಪಾವತಿಸಿರುವ ಪರಿಹಾರ</th><th>ರಾಜ್ಯ ಸರ್ಕಾರದಿಂದ ಘೋಷಿಸಿರುವಂತೆ ಪಾವತಿಸಲಾಗಿರವ ಹೆಚ್ಚುವರಿ ಪರಿಹಾರ</th><th>ಒಟ್ಟು</th></tr>
<tr><td>ಕಲಬುರಗಿ</td><td>250,97</td><td>247.76</td><td>498.73</td></tr>
<tr><td>ಯಾದಗಿರಿ</td><td>123.53</td><td>95.59</td><td>219.12</td></tr>
</table></td></tr>
<tr><td>ಇ</td><td>ಈ ಮೇಲ್ಕಂಡ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದಾಗಿ ಹಾಗೂ ಭೀಮಾ ನದಿಯ ಪ್ರವಾಹದಿಂದ ನೊಂದ ರೈತರು ಬೆಳೆ ನಷ್ಟ ಹಾಗೂ ಸಾಲ ಬಾಧೆಯಿಂದ ಸಾವಿನ ಮನೆಯತ್ತ ಮುಖ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="2">ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.</td></tr>
<tr><td>ಈ</td><td>ಬಂದಿದಲ್ಲಿ ಇದುವರೆವಿಗೂ ಎಷ್ಟು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ರೈತರ ಆತ್ಮಹತ್ಯೆಯನ್ನು ತಪ್ಪಿಸಲು ವಿಶೇಷ ಪ್ಯಾಕೇಜು ಘೋಷಿಸುವ ಯೋಜನೆ ಸರ್ಕಾರದ ಮುಂದಿದೆಯೆ? (ವಿವರ ನೀಡುವುದು)</td></tr>
</table>

**ಕಡತ ಸಂಖ್ಯೆ:** ಇ-ಕಂಇ 532 ಟಿಎನ್‌ಆರ್ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು